## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೆ.ಜಿ.ಎಫ್ ನ ಸಾಯಿಕೃಷ್ ಖಾಸಗಿ ಪಾಲಿಟೆಕ್ನಿಕ್ ಈ ಸಂಸ್ಥೆಯಲ್ಲಿ "ಮೈನಿಂಗ್ ಇಂಜಿನಿಯರಿಂಗ್' ಡಿಪ್ಲೋಮಾ ಕೋರ್ಸ್‌ನ್ನು ನಡೆಸಲು ಸರ್ಕಾರದ ಅನುಮತಿ ನೀಡುವ ಬಗ್ಗೆ-

-----

**ಓ ದ ಲಾ ಗಿ ದೆ:-**

1. Member Secretary, All Indian council for Technical Education ಇವರ ಪತ್ರ ಸಂ: South-West/1-13327277576-2017/EOA, Dated:10-04-2017.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 04 ಡಿವಿಪಿ (2) 2017, ದಿ:16-06-2017.

**ಪ್ರ ಸ್ತಾ ವ ನೆ:-**

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ Member Secretary, All Indian council for Technical Education ಇವರು ಕೆ.ಜಿ.ಎಫ್ ನ ಸಾಯಿಕೃಷ್ ಖಾಸಗಿ ಪಾಲಿಟೆಕ್ನಿಕ್‌ನಲ್ಲಿ 2017-18ನೇ ಶೈಕ್ಷಣಿಕ ಸಾಲಿನಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಕೋರ್ಸುಗಳೊಂದಿಗೆ 'ಮೈನಿಂಗ್ ಇಂಜಿನಿಯರಿಂಗ್' ಡಿಪ್ಲೋಮಾ ಕೋರ್ಸುನ್ನು 60 ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು ಕೆಲವೊಂದು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಪ್ರಾರಂಭಿಸಲು ಅನುಮತಿ ನೀಡಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರದಲ್ಲಿ ಕೆ.ಜಿ.ಎಫ್ ನ ಸಾಯಿಕೃಷ್ ಖಾಸಗಿ ಪಾಲಿಟೆಕ್ನಿಕ್‌ನಲ್ಲಿ 2017-18ನೇ ಶೈಕ್ಷಣಿಕ ಸಾಲಿನಿಂದ 'ಮೈನಿಂಗ್ ಇಂಜಿನಿಯರಿಂಗ್, ಎಂಬ ಕೋರ್ಸುನ್ನು ಪ್ರಾರಂಭಿಸಲು ಎಐಸಿಟಿಇ. ನವದೆಹಲಿ ಇವರು ಅನುಮತಿ ನೀಡಿರುವ ಮೇರೆಗೆ ಸದರಿ ಸಂಸ್ಥೆಯ ಪ್ರಾಂಶುಪಾಲರು 2017-18ನೇ ಸಾಲಿನಿಂದ ಹೊಸ ಕೋರ್ಸುನ್ನು ಪ್ರಾರಂಭಿಸಲು ಕೋರಿದ ಹಿನ್ನೆಲೆಯಲ್ಲಿ, ಈ ಬಗ್ಗೆ ನಿರ್ದೇಶನಾಲಯದ ವತಿಯಿಂದ ಸ್ಥಳ ತನಿಖಾ ತಂಡವನ್ನು ರಚಿಸಿ, ಸ್ಥಳ ತನಿಖೆಯನ್ನು ಆಯೋಜಿಸಿ ವರದಿಯನ್ನು ಪಡೆದುಕೊಳ್ಳಲಾಗಿದ್ದು, ಸದರಿ ಸ್ಥಳ ತನಿಖಾ ವರದಿಯಲ್ಲಿ 2017-18ನೇ ಸಾಲಿನಿಂದ ಕೆ.ಜಿ.ಎಫ್ ನ ಸಾಯಿಕೃಷ್ ಖಾಸಗಿ ಪಾಲಿಟೆಕ್ನಿಕ್‌ನ ವತಿಯಿಂದ 'ಮೈನಿಂಗ್ ಡಿಪ್ಲೋಮಾ ಇಂಜಿನಿಯರಿಂಗ್' ಕೋರ್ಸುನ್ನು ಪ್ರಾರಂಭಿಸಲು ಸದರಿ ಸಂಸ್ಥೆಯು ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಎಐಸಿಟಿಇ ನಿಯಮಾವಳಿಯ ಪ್ರಕಾರ ಹೊಂದಿದ್ದು, ಕೋರ್ಸುನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಕೆ.ಜಿ.ಎಫ್ ನ ಸಾಯಿಕೃಷ್ ಖಾಸಗಿ ಪಾಲಿಟೆಕ್ನಿಕ್‌ನಲ್ಲಿ 2017-18ನೇ ಶೈಕ್ಷಣಿಕ ಸಾಲಿನಿಂದ 'ಮೈನಿಂಗ್ ಇಂಜಿನಿಯರಿಂಗ್' ಎಂಬ ಡಿಪ್ಲೋಮಾ ಕೋರ್ಸುನ್ನು ಪ್ರಾರಂಭಿಸಲು 60 ವಿದ್ಯಾರ್ಥಿ ಪ್ರಮಾಣದೊಂದಿಗೆ ಎಐಸಿಟಿಇ ಯು ಅನುಮತಿ ನೀಡಿರುವ ಕೋರ್ಸು ಮತ್ತು ಪ್ರವೇಶಾತಿ ಸಂಖ್ಯೆಯೊಂದಿಗೆ ಪ್ರಾರಂಭಿಸಲು ಅನುಮತಿ ನೀಡಬಹುದೆಂದು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸ್ಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 081 ಟಿಪಿಇ 2017.**

**ಬೆಂಗಳೂರು, ದಿನಾಂಕ:22ನೇ ಆಗಸ್ಟ್ 2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು, ಕೆ.ಜಿ.ಎಫ್ ನ ಸಾಯಿಕೃಷ್ ಖಾಸಗಿ ಪಾಲಿಟೆಕ್ನಿಕ್‌ನಲ್ಲಿ 2017-18ನೇ ಸಾಲಿನಿಂದ "ಮೈನಿಂಗ್ ಇಂಜಿನಿಯರಿಂಗ್" ಎಂಬ ಡಿಪ್ಲೋಮಾ ಕೋರ್ಸನ್ನು 60 ವಿದ್ಯಾರ್ಥಿ ಪ್ರವೇಶಾತಿ ಪ್ರಮಾಣದೊಂದಿಗೆ ಈ ಕೆಳಕಂಡ ಷರತ್ತುಗೊಳಪಡಿಸಿ ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು**

1) ಸದರಿ ಪಾಲಿಟೆಕ್ನಿಕ್‌ನಲ್ಲಿ ಹೊಸ ಕೋರ್ಸನ್ನು ಪ್ರಾರಂಭಿಸಲು ಸರ್ಕಾರದಿಂದ ಯಾವುದೇ ಜಮೀನನ್ನು ಒದಗಿಸುವುದಿಲ್ಲ.
2) ಸದರಿ ಕೋರ್ಸನ್ನು ನಡೆಸಲು ಸರ್ಕಾರದಿಂದ ಯಾವುದೇ ಅನುದಾನವನ್ನು ಒದಗಿಸುವುದಿಲ್ಲ.
3) ಸದರಿ ಕೋರ್ಸಿನ ಪ್ರವೇಶಾತಿಗೆ ಸಂಬಂದಿಸಿದಂತೆ, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಮತ್ತು ಸೂಚನೆಗಳನ್ನು ಪಾಲಿಸುವುದು.
4) ಸದರಿ ಕೋರ್ಸಿನ ಮಂಜೂರಾತಿ ಪತ್ರದಲ್ಲಿ All Indian council for Technical Education ಇವರು ವಿಧಿಸಿರುವ ಷರತ್ತುಗಳು ಮತ್ತು ನಿಬಂಧನೆಗಳನ್ನು ಯಥಾವತ್ತಾಗಿ ಪಾಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಗೆ:

1. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು
2. ಪ್ರಾಂಶುಪಾಲರು, ಸಾಯಿಕೃಷ್ ಪಾಲಿಟೆಕ್ನಿಕ್, ಕೃಷಿ ಭವನ, ಸ್ಮಿತ್ ರಸ್ತೆ, ಓರಗಾಂ ಪೋಸ್ಟ್, ಕೆ.ಜಿ.ಎಫ್, ಕೋಲಾರ-563120 (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ ಅವರ ಆಪ್ತ ಕಾರ್ಯದರ್ಶಿಗಳು
4. ಸರ್ಕಾರದ ಉಪ ಕಾರ್ಯದರ್ಶಿ, ತಾಂತ್ರಿಕ ಮತ್ತು ಕಾಲೇಜು ಶಿಕ್ಷಣ ಇಲಾಖೆ
5. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು / ಓಡಿಜಿಸಿ

ಹಿಂಬರಹ ಸಂಖ್ಯೆ: ಡಿಟಿಇ 04 ಡಿವಿಪಿ(2) 2017 ದಿನಾಂಕ: 30/08/2017.

ಸರ್ಕಾರದ ಆದೇಶದ ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ಈ ಕೆಳಕಂಡ ಅಧಿಕಾರಿಗಳಿಗೆ ಹಾಗೂ ವಿಭಾಗಗಳಿಗೆ ಕಳುಹಿಸಲಾಗಿದೆ.

01. ಪ್ರಾಂಶುಪಾಲರು, ಸಾಯಿಕೃಪ ಖಾಸಗಿ ಪಾಲಿಟೆಕ್ನಿಕ್, ಕೃಷಿ ಭವನ, ಸ್ಮಿತ್ ರಸ್ತೆ, ಓರಗಾಂ ಪೋಸ್ಟ್, ಕೆ.ಜಿ.ಎಫ್., ಕೋಲಾರ – 563120.
02. ಜಂಟಿ ನಿರ್ದೇಶಕರು [ಆಡಳಿತ/ಪರೀಕ್ಷೆ/ತನಿಖೆ/ಎಟಿಎಸ್]
03. ಉಪ ನಿರ್ದೇಶಕರು [ಯೋಜನೆ/ಪರೀಕ್ಷೆ/ತನಿಖೆ]
04. ಸಹಾಯಕ ನಿರ್ದೇಶಕರು [ಯೋಜನೆ/ಪರೀಕ್ಷೆ/ತನಿಖೆ/ಎಂಪಿಸಿ]
05. ಉಪ ನಿರ್ದೇಶಕರು (ಸಾಂಖ್ಯಿಕ ವಿಭಾಗ)
06. ಆಡಳಿತಾಧಿಕಾರಿಗಳಿಗೆ
07. ರಿಜಿಸ್ಟ್ರಾರ್ (ಪರೀಕ್ಷೆ/ಎಸಿಎಂ)
08. ಅಧೀಕ್ಷಕರು, ಎಸಿಎಂ ವಿಭಾಗ
09. ಕಾರ್ಯನಿರ್ವಾಹಕರು, ಎಸಿಎಂ(2) ವಿಭಾಗ
10. ಕಾರ್ಯನಿರ್ವಾಹಕರು, ಡಿವಿಪಿ(1) ವಿಭಾಗ
11. ಸರ್ಕಾರಿ ಆದೇಶಗಳ ಕಡತಕ್ಕೆ
12. ಈ ಗೌರ್‌ನೆನ್ಸ್ ಸೆಲ್‌ಗೆ
13. ಸಿಸ್ಟಂ ಅನಾಲಿಸ್ಟ್, ತಾ.ಶಿ.ನಿ.
14. ಪರೀಕ್ಷಾ ವಿಭಾಗದ ಎ.ಎಫ್.ಎಸ್./ಇ.ಎ.ಪಿ./ಆರ್.ಡಿ.ಎಂ.
15. ಕಛೇರಿ ಪ್ರತಿ

ಜಂಟಿ ನಿರ್ದೇಶಕರು (ಎಟಿಎಸ್)
31/8/2017
31/08/17